# ಅದು ಬರೀ ಕುರ್ಚಿ ಅಲ್ಲ; ಸಿಹಿ ನೆನಪುಗಳ ಬುತ್ತಿ..!

‘ಉತ್ತಮ ಶಿಕ್ಷಕಿ’ ಎಂದು ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ.. ಹೀಗೆ ಎರಡೆರಡು ಪ್ರಶಸ್ತಿಗಳು ಸಿಕ್ಕರೂ ನಾನು ಒಂಬತ್ತು ತಿಂಗಳು ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿದ ಕ್ಷಣಗಳು ಮಾತ್ರ ಎಂದಿಗೂ ಖುಷಿಕೊಡುವ ಸಿಹಿ ಸಿಹಿ ನೆನಪು.!

■ ಡಾ. ಅಂಬವ್ವ ಟಿಕಾಲಗುಡ್ಡ, ಹುಕ್ಕೇರಿ

ಹುದ್ದೆ ಚಿಕ್ಕದಾಗಲಿ, ದೊಡ್ಡದೇ ಆಗಲಿ, ಅಲ್ಲಿ ಸಿಗುವ ಅನುಭವ ನಿತ್ಯವೂ ಹೊಸದು. ಆ ನೆನಪುಗಳು ಎಂದಿಗೂ ಅಜರಾಮರ. ನಾನು ಶಾಲಾ ಶಿಕ್ಷಕಿಯಾಗಿ, ಕಾಲೇಜು ಪ್ರಿನ್ಸಿಪಾಲ್ ಆಗಿ ಮುಂದೆ ಉತ್ತಮ ಶಿಕ್ಷಕಿ ಪ್ರಶಸ್ತಿಯನ್ನು ರಾಜ್ಯ, ರಾಷ್ಟ್ರಮಟ್ಟದಲ್ಲಿ ಪಡೆದೆ. ಆ ಪ್ರಶಸ್ತಿಗಳಿಗಿಂತಲೂ ಒಂಬತ್ತು ತಿಂಗಳ ಕಾಲ ಕಾಲೇಜು ಪ್ರಿನ್ಸಿಪಾಲ್ ಆಗಿ ‘ಆ ಕುರ್ಚಿ’ಯಲ್ಲಿ ಕುಳಿತು ಮಾಡಿದ ವಿದ್ಯಾ ಸೇವೆ ನೆನಪು ಮಾತ್ರ ಎಂದಿಗೂ ಸಿಹಿ ಸಿಹಿ..!

ನಾನು ಒಂದು ಮಾಧ್ಯಮಿಕ ಶಾಲೆಯಲ್ಲಿ ವಿಜ್ಞಾನ ಶಿಕ್ಷಕಿಯಾಗಿದ್ದೆ. ಈ ಹುದ್ದೆಗೆ ಇರಬೇಕಾದ ಬಿಇಡಿ ಇನ್ನೂ ಮಾಡಿರಲಿಲ್ಲ. ನಂತರ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಷನ್ ನಲ್ಲಿ ಬಿಇಡಿ ಮುಗಿಸಿದೆ. ಅದೊಂದು ತುಂಬಾ ಒಳ್ಳೆಯ ಸಂಸ್ಥೆ. ಅಲ್ಲಿ ನನಗೆ ಹೆಚ್ಚಿನ ಓದಿಗಾಗಿ ಬಹಳಷ್ಟು ಪ್ರಚೋದನೆ ಸಿಕ್ಕಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಒಕೇಷನಲ್ ಎಂಇಡಿ (Vocational MEd) ಮಾಡಿದೆ. ನಂತರ ಅಲ್ಲಿಂದಲೇ ಎಂ.ಎ ಮಾಡಿಕೊಂಡೆ.




‘ಉತ್ತಮ ಶಿಕ್ಷಕಿ’ ರಾಜ್ಯಪ್ರಶಸ್ತಿ ಪಡೆದ ಸುಂದರ ಕ್ಷಣ

ನಾನು ಕೆಲಸ ಮಾಡುತ್ತಿದ್ದ ಸಂಸ್ಥೆಯವರು ತಮ್ಮ ಸಂಸ್ಥೆಯನ್ನು ಪದವಿ ಪೂರ್ವ ಮಹಾವಿದ್ಯಾಲಯವಾಗಿ ಮೇಲ್ದರ್ಜೆಗೆ ಏರಿಸಿದರು. ಅಲ್ಲಿ ಟಿ.ಸಿ.ಎಚ್. ಸರಿಸಮಾನವಾದ ಪಿಯುಸಿ ಯೂನಿಟ್ ಎಜ್ಯುಕೇಶನ್ (ಶಿಕ್ಷಣ) ವಿಷಯದೊಂದಿಗೆ ಆರಂಭಿಸಿದರು. ಪಿಯುಸಿ ನಂತರ ಪ್ರಶಿಕ್ಷಣಾರ್ಥಿಗಳು 6 ತಿಂಗಳ ಇಂಟರ್ನ್‌ಶಿಪ್ ಕೋರ್ಸ್ ಅನ್ನು ಮಾಡಬೇಕಿತ್ತು. ಅಂಥವರು ಪ್ರಾಥಮಿಕ ಶಾಲಾ ಶಿಕ್ಷಕರಾಗುವ ಅರ್ಹತೆ ಹೊಂದುತ್ತಿದ್ದರು. ನನಗೆ  ಸಂಸ್ಥೆಯವರು ಬೆಳಗಿನ ಅವಧಿಗಳಲ್ಲಿ ಶಿಕ್ಷಣ ವಿಷಯ ಕಲಿಸಲು ಅರೆಕಾಲಿಕ ಉಪನ್ಯಾಸಕಿಯಾಗಿ ಅವಕಾಶ ನೀಡಿದರು. ನನಗೂ ಖುಷಿಯಾಯ್ತು. ಕಾಲೇಜು ಗ್ರಾಂಟ್ ಆದ ಮೇಲೆ ಪೂರ್ಣಾವಧಿ ಉಪನ್ಯಾಸಕರು, ನಂತರ... ಪ್ರಾಚಾರ್ಯರಾಗುವ ಶುಭಯೋಗ... ನೆನೆದು ಪುಳಕಿತಳಾದೆ. ಅಷ್ಟರಲ್ಲಿ ನಾಲ್ಕು ವರ್ಷಗಳು ಕಳೆದವು. ಅಲ್ಲಿ ಓದಿದ ಎಷ್ಟೋ ಮಂದಿ ಪ್ರಶಿಕ್ಷಣಾರ್ಥಿಗಳು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿರುವುದನ್ನು ಕಂಡು ಹೆಮ್ಮೆಪಟ್ಟೆ.

ಅಷ್ಟರಲ್ಲಿ ವ್ಯವಸ್ಥಾಪಕ ಸಮಿತಿಯವರು ನನ್ನನ್ನು ತಮ್ಮದೇ ಆದ ಹೆಣ್ಣು ಮಕ್ಕಳ ಮಾಧ್ಯಮಿಕ ಶಾಲೆಗೆ ಮುಖ್ಯ ಶಿಕ್ಷಕಿಯಾಗಿ ಬಡ್ತಿ ಕೊಟ್ಟು ವರ್ಗಾಯಿಸಿದರು. ಬಡ್ತಿ ಒಂದು ಹೆಮ್ಮೆ ವಿಷಯ. ಆದರೆ ನನ್ನ ಸ್ವಪ್ನದ ಲೆಕ್ಚರರ್... ಪ್ರಿನ್ಸಿಪಾಲ್ ಆಗುವ ಆಶೆ ಕುಸಿದು ಬಿತ್ತು. ಅಂತೂ ಹೊಸ ಶಾಲೆ ಸೇರಿದೆ. ತುಂಬ ಹುಮ್ಮಸ್ಸಿನಿಂದ ಶಾಲೆಯ ಪ್ರಗತಿಗೆ ಸಿಬ್ಬಂದಿ ಸಹಾಯದಿಂದ ಪಟ್ಟ ಶ್ರಮದ ಫಲವಾಗಿ 300 ಹೆಣ್ಣು ಮಕ್ಕಳ ಸಂಖ್ಯೆ 600ಕ್ಕೆ ಏರಿಕೆ ಆಯ್ತು. ಶಾಲೆ ಒಂದಿಷ್ಟು ಹೆಸರನ್ನು ಗಳಿಸಿತು. ನಾನು ಹಳೆಯದನ್ನೆಲ್ಲ (ಆಶೆ) ಮರೆತು ತೃಪ್ತಿಯಿಂದ ಇದ್ದೆ.

ವ್ಯವಸ್ಥಾಪಕ ಸಮಿತಿಯವರು ಮತ್ತೊಮ್ಮೆ ತಮ್ಮದೇ ಆದ ಪಿ.ಯು. ಕಾಲೇಜ್‌ಗೆ ಇನ್‌ಚಾರ್ಜ್ ಪ್ರಿನ್ಸಿಪಾಲ್ ಎಂದು ಹೆಚ್ಚಿನ ಜವಾಬ್ದಾರಿ ಹೊರಿಸಿ ವರ್ಗಾಯಿಸಿದರು. ಆಗ ನನಗೆ ಏನೇನೂ ಬೇಜಾರಾಗಲಿಲ್ಲ. ನನ್ನ ಆಶೆ ಇನ್‌ಚಾರ್ಜ್ ಪ್ರಿನ್ಸಿಪಾಲ್‌ರಾಗಿಯಾದರೂ ಈಡೇರುವ ಸಮಯ ಬಂತೆಂದು ಹಿಗ್ಗಿ, ಅದನ್ನು ಒದಗಿಸಿ ಕೊಟ್ಟ ಸಂಸ್ಥೆಯವರಿಗೆ ಧನ್ಯವಾದ ಹೇಳಿ ಹೊಸ ಸಂಸ್ಥೆ ಸೇರಿದೆ. ಇನ್‌ಚಾರ್ಜ್ ಆದರೂ ಪರವಾಗಿಲ್ಲ, ಅದು ಪ್ರಾಚಾರ್ಯರ ಕುರ್ಚಿ ಅಲ್ಲವೇ ಎಂದುಕೊಂಡು ಆ ಆತುರದಲ್ಲಿ ದೂರ ಪ್ರಯಾಣ ಮಾಡಬೇಕಾದ ದಣಿವನ್ನು ಮರೆತು ಕೆಲಸಕ್ಕಿಳಿದೆ. ಹೊಸ ಕಾಲೇಜಿನ ಹರವಾದ ಮೈದಾನದಲ್ಲಿ ವಿವಿಧ ಹಳೆಯ, ಹೊಸ ಆಟಗಳನ್ನು ಸ್ಪರ್ಧೆಗಳನ್ನು ಆಡಲು ಪ್ರೋತ್ಸಾಹಿಸುತ್ತ, ಪಠ್ಯಪುಸ್ತಕ ಜ್ಞಾನದೊಂದಿಗೆ ಪ್ರಯೋಗ, ಶಾಲಾ ಕ್ರಿಯಾಶೀಲತೆ ಪೂರೈಸುತ್ತ ಮಾತೃಭಾಷಾ ಪ್ರಾಧಾನ್ಯತೆ ಜೊತೆಗೆ ಹಿಂದಿ, ಇಂಗ್ಲಿಷ್ ಭಾಷೆಗಳನ್ನು ಪರಿಚಯಿಸುತ್ತ ಆಧುನಿಕತೆಯ ಗಾಳಿ ಅಲ್ಲಿ ತುಂಬಿದೆ. ನನಗೆ ಲಭ್ಯವಿದ್ದ 9 ತಿಂಗಳ ಅವಧಿಯಲ್ಲಿ ವಿದ್ಯಾರ್ಥಿ ಸಮುದಾಯದ, ಪಾಲಕರ ಸಮೂಹದ, ಶಿಕ್ಷಕ ಸಿಬ್ಬಂದಿಯವರ ಹಾಗೂ ವ್ಯವಸ್ಥಾಪಕ ಸಮಿತಿಯವರೆಲ್ಲರ ಮನಗೆದ್ದೆ. ಇದೊಂದು ಒಳ್ಳೆಯ ಸಿಹಿ ಸಿಹಿ ಅನುಭವ. ಅದನ್ನು ವರ್ಣಿಸಲಸಾಧ್ಯ, ಮರೆಯಲಸಾಧ್ಯ.

ನನಗೂ, ಹೆಣ್ಣು ಮಕ್ಕಳ ಮಾಧ್ಯಮಿಕ ಶಾಲೆಗೂ ಅಂಟಿದ ನಂಟು ಬಿಡಿಸಲಸಾಧ್ಯವೇನೋ ಎಂಬಂತೆ ಮತ್ತೆ ನಾನು ಕಾರಣಾಂತರದಿಂದ ಹೆಣ್ಣು ಮಕ್ಕಳ ಶಾಲೆಯನ್ನು ಸೇರಿದೆ, ಇನ್ನಷ್ಟು ದುಡಿದೆ. ಪರಿಣಾಮ ಶಾಲೆಯ ಪ್ರಗತಿ ಅರಿತ ರಾಜ್ಯ ಸರ್ಕಾರವು ‘ಉತ್ತಮ ಶಿಕ್ಷಕಿ’ ರಾಜ್ಯ ಪ್ರಶಸ್ತಿಯನ್ನು ನೀಡಿ ಗೌರವಿಸಿತು. ಮತ್ತೆರಡು ವರ್ಷ ಕಳೆಯುವಷ್ಟರಲ್ಲಿ ಕೇಂದ್ರ ಸರ್ಕಾರ (ಮಾನವ ಸಂಪನ್ಮೂಲ) ‘ಉತ್ತಮ ಶಿಕ್ಷಕಿ’ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಿತು. ಎರಡೆರಡು ಪ್ರಶಸ್ತಿಗಳು ಸಿಕ್ಕರೂ ನಾನು 9 ತಿಂಗಳು ಪ್ರಿನ್ಸಿಪಾಲ್ ಆಗಿ ಕೆಲಸ ಮಾಡಿದ ಪ್ರತಿದಿನದ ನೆನಪು, ಸಿಹಿ ಸಿಹಿ ನೆನಪು.  ನನ್ನ ಮನದಲ್ಲಿ ಸುಳಿದು, ಸುಂದರ ಲೋಕ ನಿರ್ಮಿಸಿ ಸಂತೋಷಗೊಳಿಸುತ್ತಾ ಇರುತ್ತದೆ. ■